
# ತಳವಿರದ ಬಾವಿಗೆ ಎಸೆದ ಕಲ್ಲು

ಕವಿ ಮತ್ತು ಕವಿತೆಯ ಸಂಬಂಧ ಹೇಗಿರಬೇಕು
ಬರೆದು ಬಿಸಾಕಬೇಕು ನಿರ್ಲಿಪ್ತನಾಗಿರಬೇಕು ತನ್ನದಲ್ಲ
ಎನ್ನುವಂತಿರಬೇಕು ತಾನೇ ಓದಿ ಬೆರಗಾಗಬೇಕು
ಬೇಕು ಎನ್ನುತ್ತಲೇ ಬೇಡವೂ ಆಗಿರಬೇಕು ಜೇಡ ಕಟ್ಟುತ್ತದೆ
ಪ್ರತಿ ದಿನ ಹೊಸ ಬಲೆಯನ್ನು ಹಳೆ ರೀತಿಯಲ್ಲಿ

ಎಲ್ಲರಿಗೂ ಅರ್ಥವಾಗುವ ಮೇಲಿನ ಸಾಲುಗಳು ಕೆ.ವಿ. ತಿರುಮಲೇಶರ 'ಅವ್ಯಯ ಕಾವ್ಯ' ಪುಸ್ತಕದಲ್ಲಿದೆ. ಬೇಡ ಪದವನ್ನು ಜೇಡ ಪದವು ಅನುಸರಿಸಿಕೊಂಡು ಬಂದು ಶಾಬ್ದಿಕ ಸಂಚಲನವನ್ನುಂಟು ಮಾಡಿ, 'ಹೊಸ ಬಲೆ; ಹಳೆ ರೀತಿ' ಎಂಬ ಉಪಮೆಯೊಂದಿಗೆ ಕೊನೆಯಾಗುತ್ತದೆ. ಕವಿ–ಕಾವ್ಯ ಸಂಬಂಧಕ್ಕೆ ಇದು ನೇರವಾದ ಹೋಲಿಕೆ ಅಲ್ಲದಿದ್ದರೂ, ಉಪಮೆಯೇ. ಅದಕ್ಕಿಂತಲೂ ಹೆಚ್ಚಾಗಿ ಬಲೆ ಎಂಬ ಪ್ರತಿಮೆ ಹೆಚ್ಚು ಪ್ರಕಾಶಮಾನವಾಗಿ ಉಳಿಯುತ್ತದೆ. ಹಳೆ ರೀತಿಯಲ್ಲಿ ಹೊಸ ಬಲೆ ಪ್ರತಿ ದಿನ ಎಂದಾಗ, ವಿವಿಧ ವಿನ್ಯಾಸದ ಹಲವು ಬಲೆಗಳ ಚಿತ್ರ ಮನಸ್ಸಿಗೆ ಬರುತ್ತದೆ. ಪೇಲವವಾದ ಹಳೆಯದಾದ ಮೊದಲ ಮೂರು ಸಾಲು ಮರೆತೇ ಹೋಗಿರುತ್ತದೆ. ಕವಿ ಕಾವ್ಯ ಸಂಬಂಧವು ಜೇಡ ಬಲೆಯ ಸಂಬಂಧದಂತೆ ಅನ್ನುವುದು ಸ್ಫುಟವಾಗುತ್ತದೆ. ಮತ್ತು, ಇದುವರೆಗೆ ಕನ್ನಡ ಕಾವ್ಯದಲ್ಲಿ ಬಂದಿರುವ ಜೇಡ ಮತ್ತು ಬಲೆಯ ಪ್ರಯೋಗದಲ್ಲಿ ಉಂಟುಮಾಡಿರುವ ನೇತ್ಯಾತ್ಮಕ (ಜೇಡವು ತಾನೇ ನೇಯ್ದ ಬಲೆಯೊಳಗೆ ಬಂಧಿಯಾದ) ಭಾವವನ್ನು ಹೊಡೆದು ಹಾಕುತ್ತದೆ. ಬಲೆ ನೇಯುವಾಗ, ನೇಯ್ದ ಮೇಲೂ ಜೇಡದಂತೆ ಕವಿಯೂ ಒಂಟಿಯೇ.




ಅವ್ಯಯ ಕಾವ್ಯ
ಲೇ: ಕೆ.ವಿ. ತಿರುಮಲೇಶ್
ಪ್ರ: ಅಭಿನವ ಪ್ರಕಾಶನ
ವಿಜಯನಗರ,
ಬೆಂಗಳೂರು

ಇನ್ನೂರೆಂಬತ್ತು ಪುಟದ 'ಅವ್ಯಯ ಕಾವ್ಯದ' ಪ್ರತಿ ಪುಟವೂ ವಿವಿಧ ವಿನ್ಯಾಸದ ಜೇಡನ ಬಲೆಯಂತೆ ಗೋಚರಿಸುತ್ತದೆ. ಅದರ ಉದ್ದಕ್ಕೂ ಮಾನವ ಇತಿಹಾಸದ ಧೇನಿಕೆ ಇದೆ. ಸ್ವಗತದ ಮಾದರಿಯಲ್ಲಿ ಕಟ್ಟಲಾಗಿದೆ. ಕುಂಗ್ ತತ್ವಜ್ಞಾನದಿಂದ ಶುರುವಾಗಿ, ದೇವರು, ಇತಿಹಾಸ, ಧರ್ಮ, ಚೆಂಗಿಸ್ ಖಾನ್, ಅಬ್ದೋ, ಪ್ಲೇಟೋ, ಶರೀಫ, ಕಾಫ್ಕಾ, ಲೆನಿನ್, ಸ್ಟಾಲಿನ್, ಕ್ಷಣಿಕ–ಶಾಶ್ವತ, ಕವಿತೆ–ಬದುಕು, ಬಂಡೆ–ಹುಲ್ಲು, ಸಾಮ್ರಾಜ್ಯ, ಯುದ್ಧ, ಪತನ, ಇವೆಲ್ಲದರ ನಡುವೆ ಮಕ್ಕಳು ಚಿಟ್ಟೆಗಳಿಗೆ ಬಣ್ಣ ಹಚ್ಚುವುದು – ಹೀಗೆ ಒಂದೊಂದು ಚಿಂತನೆಯು ದರ್ಶನವು ಮತ್ತೊಂದನ್ನು ಮುಂದುವರಿಸುವಂತೆ, ವಿಸ್ತರಿಸುವಂತೆ, ಕೆಲವು ಕಡೆ ವಿಶ್ಲೇಷಿಸುವಂತೆ